# ರೇಷ್ಮೆ ಬೆಳೆಗಾರರ ಹಾಗೂ ರೈತರ ಸೇವಾ ಸಹಕಾರ ಸಂಘ ನಿ.,
# ಸರ್ಜಾಪುರ-562125, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.

ಬಿ.ಎಂ.ಆರ್.ನ. 12 ದಿನಾಂಕ:14-08-2023 E-mail :scfsc.society@gmail.com

## ನೇಮಕಾತಿ ಪ್ರಕಟಣೆ

ಸಂಘದಲ್ಲಿ ಖಾಲಿ ಇರುವ 5 (ಐದು) ಕಿರಿಯ ಸಹಾಯಕ ಕಂ ಮಾರಾಟ ಗುಮಾಸ್ತ (Junior Assistant cum sales Clerk) ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. **ಸಂಘವು ಪೂರೈಸುವ ಮೂಲ ಅರ್ಜಿಯೊಂದಿಗೆ** ಪೂರಕ ದಾಖಲೆಗಳ ನಕಲುಗಳನ್ನು ಸ್ವಯಂ ದೃಢೀಕರಿಸಿ, ದಿನಾಂಕ:28-12-2023 ರಂದು ಸಂಜೆ 5.00 ಘಂಟೆ ಒಳಗಾಗಿ ಸಂಘಕ್ಕೆ ತಲುಪುವಂತೆ ಸಲ್ಲಿಸತಕ್ಕದ್ದು.

**ವಿವರಣೆ:**

**1. ಹುದ್ದೆಯ ಹೆಸರು: ಕಿರಿಯ ಸಹಾಯಕ ಕಂ ಮಾರಾಟ ಗುಮಾಸ್ತ (Junior Assistant cum sales Clerk)**

| ವರ್ಗ | ಹುದ್ದೆಗಳು |
|---|---|
| ಸಾಮಾನ್ಯ ಅಭ್ಯರ್ಥಿ | 2 |
| ಪ್ರವರ್ಗ-2A | 1 |
| ಪ್ರವರ್ಗ-3A | 1 |
| ಪ್ರವರ್ಗ-3B | 1 |
| ಒಟ್ಟು | 5 |

**2. ವೇತನ ಶ್ರೇಣಿ: ರೂ. 21400-500-22400-550-24600-600-27000-650-29600-750-32600-850-36000-950-39800-1100-42000**

**3. ವಿದ್ಯಾರ್ಹತೆ:**

ಅ) ಅಂಗೀಕೃತ ವಿಶ್ವವಿದ್ಯಾಲಯದ ಯಾವುದೇ ಪದವಿಯಲ್ಲಿ ಉತ್ತೀರ್ಣರಾಗಿರಬೇಕು.

ಆ) ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣ ಹೊಂದಿರಬೇಕು ಹಾಗೂ ಭಾಷಾ ಜ್ಞಾನ ಕಡ್ಡಾಯವಾಗಿ ಹೊಂದಿರಬೇಕು.

ಇ) ಕಂಪ್ಯೂಟರ್ ಆಪರೇಷನ್ ಮತ್ತು ಅಪ್ಲಿಕೇಶನ್ಸ್ ತರಬೇತಿ ಮತ್ತು ಜ್ಞಾನ ಹೊಂದಿರಬೇಕು.

**4. ವಯೋಮಿತಿ:**

ಅಭ್ಯರ್ಥಿಗೆ ಅರ್ಜಿಯನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕಕ್ಕೆ ಕನಿಷ್ಠ 18 ವರ್ಷ ತುಂಬಿರಬೇಕು ಹಾಗೂ ಈ ಕೆಳಕಂಡಂತೆ ಗರಿಷ್ಠ ವಯೋಮಿತಿಗೊಳಪಟ್ಟಿರಬೇಕು.

ಅ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ-1 ಅಭ್ಯರ್ಥಿಗಳಿಗೆ – 40 ವರ್ಷಗಳು

ಆ) 2ಎ, 2ಬಿ, 3ಎ, 3ಬಿ ವರ್ಗಗಳ ಅಭ್ಯರ್ಥಿಗಳಿಗೆ – 38 ವರ್ಷಗಳು

ಇ) ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ – 35 ವರ್ಷಗಳು

**5. ಅರ್ಜಿ ಸಲ್ಲಿಸುವ ವಿಧಾನ:**

ಅ) ಸಂಘದ ಕೇಂದ್ರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಅರ್ಜಿಗಳನ್ನು ವಿತರಿಸಲಾಗುವುದು. ರೂ. 1000/- ಪಾವತಿ ಮಾಡಿ ಅರ್ಜಿಯನ್ನು ಪಡೆಯಬಹುದು. ಈ ಹಣವನ್ನು ಯಾವುದೇ ಸಂದರ್ಭದಲ್ಲಿ ಹಿಂದಿರಿಗಿಸಲಾಗುವುದಿಲ್ಲ.

ಆ) ಸಂಘದಿಂದ ಪೂರೈಸಿದ ಮೂಲ ಅರ್ಜಿಯಲ್ಲಿ ಭರ್ತಿ ಮಾಡಿ ಅರ್ಜಿಯೊಂದಿಗೆ ಪೂರಕ ದಾಖಲೆಗಳ ನಕಲುಗಳನ್ನು ಸ್ವಯಂ ದೃಢಿಕರಿಸಿ ಸದಸ್ಯ ಕಾರ್ಯದರ್ಶಿ, ಸಿಬ್ಬಂದಿ ನೇಮಕಾತಿ ಸಮಿತಿ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ರೇಷ್ಮೆ ಬೆಳೆಗಾರರ ಹಾಗೂ ರೈತರ ಸೇವಾ ಸಹಕಾರ ಸಂಘ ನಿ. ಬಸ್ ನಿಲ್ದಾಣದ ಪಕ್ಕ, ಸರ್ಜಾಪುರ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ 562125. ಇವರಿಗೆ ದಿನಾಂಕ: 28-12-2023 ರಂದು ಸಂಜೆ 5.00 ಘಂಟೆ ಒಳಗಾಗಿ ಖುದ್ದಾಗಿ ಸಲ್ಲಿಸತಕ್ಕದ್ದು.

**6. ಈ ಕೆಳಗಿನ ದಾಖಲಾತಿಗಳನ್ನು ಸ್ವಯಂ ದೃಢಿಕರಿಸಿ ಲಗತ್ತಿಸಬೇಕು.**

ಅ) ಸ್ವ-ಹಸ್ತಾಕ್ಷರವಿರುವ ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ 2 ಭಾವಚಿತ್ರ ಅಂಟಿಸಬೇಕು.

ಆ) ಆಧಾರ್ ಕಾರ್ಡ್/ಡ್ರೈವಿಂಗ್ ಲೈಸೆನ್ಸ್/ವೋಟರ್ ಐಡಿ/ಪಾಸ್‌ಪೋರ್ಟ್ ಲಗತ್ತಿಸಬೇಕು.

ಇ) ವಯಸ್ಸು ದೃಢಿಕರಣ ಕುರಿತು 10ನೇ ತರಗತಿ ಅಂಕ ಪಟ್ಟಿ ಲಗತ್ತಿಸಬೇಕು.

ಈ) ವಿದ್ಯಾರ್ಹತೆಗೆ ಸಂಬಂಧಪಟ್ಟ ಪದವಿ ಅಂಕಪಟ್ಟಿಗಳನ್ನು ಲಗತ್ತಿಸಬೇಕು.

ಉ) ಕಂಪ್ಯೂಟರ್ ತರಬೇತಿ ಹೊಂದಿರುವ ಕುರಿತು ಸರ್ಟಿಫಿಕೆಟ್ ಲಗತ್ತಿಸಬೇಕು.

ಊ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗದ ಅಭ್ಯರ್ಥಿಗಳು ಸಂಬಂಧಿಸಿದ ಪ್ರಾಧೀಕಾರದಿಂದ ಪಡೆದ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

**7. ಇತರ ಷರತ್ತುಗಳು:**

ಅ) ಪೂರ್ಣ ವಿವರಗಳನ್ನು ಸಲ್ಲಿಸದ, ಸ್ಪಷ್ಟವಾಗಿ ಬರೆಯದ, ಅಪೂರ್ಣವಿದ್ದ, ಸಹಿ ಮಾಡದೇ ಇರುವ, ಅವಶ್ಯ ದಾಖಲಾತಿಗಳನ್ನು ಸಲ್ಲಿಸದ ಹಾಗೂ ಅವಧಿ ಮೀರಿ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಆ) ನೇಮಕಾತಿಯನ್ನು ಯಾವುದೇ ಕಾರಣವನ್ನು ನೀಡದೇ ಮುಂದೂಡುವ, ರದ್ದು ಪಡಿಸುವ ಹಾಗೂ ನಿಬಂಧನೆಗಳನ್ನು ಬದಲಾಯಿಸುವ ಮತ್ತು ಷರತ್ತುಗಳನ್ನು ವಿಧಿಸುವ ಸಂಪೂರ್ಣ ಹಕ್ಕನ್ನು ಸಂಘವು ಕಾಯ್ದಿರಿಸಿಕೊಂಡಿದೆ.

ಇ) ಆಯ್ಕೆಗೊಂಡ ಅಭ್ಯರ್ಥಿಗಳು ಎರಡು ವರ್ಷದ ಅವಧಿಯ ಪರಿಕ್ಷಾರ್ಹ ಸೇವೆಯಲ್ಲಿ ಇರಬೇಕಾಗುವುದು. ಪರಿಕ್ಷಾರ್ಹ ಸೇವಾವಧಿಯಲ್ಲಿ stipend ನೀಡಲಾಗುವುದು.

ಈ) ಅರ್ಜಿ ಸಲ್ಲಿಸಿದ ಅರ್ಹ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ ನಡೆಸಲಾಗುವುದು. ಲಿಖಿತ ಪರೀಕ್ಷೆಯಲ್ಲಿ ಪಡೆಯಲಾದ ಅಂಕಗಳ ಆಧಾರದ ಮೇಲೆ 1:5 ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುವುದು.

ಉ) ಲಿಖಿತ ಪರೀಕ್ಷೆಯ ವೇಳೆ, ದಿನಾಂಕ, ಮತ್ತು ಸ್ಥಳದ ವಿವರವನ್ನು ಅಭ್ಯರ್ಥಿಗಳಿಗೆ ರಿಜಿಸ್ಟರ್ಡ್ ಪೋಸ್ಟ್ ಮೂಲಕ ತಿಳಿಸಲಾಗುವುದು. ಲಿಖಿತ ಪರೀಕ್ಷೆಗೆ ಕರೆಯೋಲೆ ಮುಟ್ಟದಿದ್ದಲ್ಲಿ / ಯಾವುದೇ ಕಾರಣಕ್ಕಾಗಿ ತಲುಪದಿದ್ದಲ್ಲಿ ಸಂಘವು ಜವಾಬ್ದಾರಿಯಾಗುವುದಿಲ್ಲ

**ದಿನಾಂಕ: 27-11-2023**

**ಸ್ಥಳ: ಸರ್ಜಾಪುರ**

(ಸಹಿ) ಸದಸ್ಯ ಕಾರ್ಯದರ್ಶಿ,
ಸಿಬ್ಬಂದಿ ನೇಮಕಾತಿ ಸಮಿತಿ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿ
ರೇಷ್ಮೆ ಬೆಳೆಗಾರರ ಹಾಗೂ ರೈತರ ಸೇವಾ ಸಹಕಾರ ಸಂಘ ನಿ., ಸರ್ಜಾಪುರ